Minerals that are available in Holenaras pur Taluk

*Q.—1142. Sri H. D. DEVEGOWDA (Holenarasipur).—

Will the Government be pleased to state:—

(a) the minerals that are available in Holenarasipur taluk;

(b) whether they intend to start any industry from the minerals available there at present;

(c) whether the local leaders have made representations to them requesting to start an industry there;

(d) if so, the action taken by them in this behalf?

A.—Sri K. MALLAPPA (Minister for Industries and Commerce).—

(a) Asbestos, Kyanite, Feldspar, Mica, Stauralite, Garnet, Talc, Soapstone, Corrundum, Byrel.

(b) No.

(c) Yes, for starting a cement asbestos industry.

(d) The quality of asbestos is not suited for the manufacture of asbestos sheets industry.

ಶ್ರೀ ಎಚ್. ಡಿ. ದೇವೇಗೌಡ—ಹೊಳೇನರಸೀಪುರ ತಾಲ್ಲೂಕಿನಲ್ಲಿ ಏನೇನು ಖನಿಜಗಳು ಸಿಕ್ಕುತ್ತವೆಯೋ ಅವುಗಳನ್ನು ಉಪಯೋಗಿಸಿ ಯಾವಯಾವ ಕೈಗಾರಿಕೆ ಸ್ಥಾಪನೆ ಮಾಡಲು ಅವಕಾಶವಿದೆ?

Sri K. MALLAPPA.—It is a matter for investigation by a Scientist

ಶ್ರೀ ಎಚ್. ಡಿ. ದೇವೇಗೌಡ.—ಸಿಮೆಂಟ್ ಕಲ್ಲಾರು ಕೈಗಾರಿಕೆ ಪ್ರಾರಂಭಿಸುವ ವಿಚಾರದಲ್ಲಿ ಅರ್ಜಿ ಸಲ್ಲಿಸಿದ್ದಾರೆಂದು ತಾವು ತಿಳಿಸಿದ್ದೀರಿ. ಇಲ್ಲಿ ದೊರೆಯುವ ಕಲ್ಲಾರು ಅಷ್ಟು ಉತ್ಕೃಷ್ಟವಾಗಿರುವುದಿಲ್ಲ ಎಂದು ಹೇಳಿದ್ದೀರಿ. ಯಾವ ಅಭಿಪ್ರಾಯದ ಮೇಲೆ ಈ ನಿರ್ಣಯಕ್ಕೆ ಬರಲಾಗಿದೆ?

† ಶ್ರೀ ಕೆ. ಮಲ್ಲಪ್ಪ.—ತಜ್ಞರ ಅಭಿಪ್ರಾಯದ ಮೇರೆ.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—ಕಲ್ಲಾರು ಉಪಯೋಗಿಸಿ ವಿಚಾರದಲ್ಲಿ ಒಂದು ಬ್ಲೂಪ್ರಿಂಟ್ ತಯಾರು ಮಾಡಿ ಕಳಿಸಿರುವುದನ್ನು ಏಕೆ ಪರಿಶೀಲನೆ ಮಾಡಬಾರದು?

ಶ್ರೀ ಕೆ. ಮಲ್ಲಪ್ಪ.—ಸರಿಯಾದ ಸಲಹೆ ಕೊಡಬೇಕಾಗುತ್ತದೆ. ಅಲ್ಲಿ ಅದು ಸಾಕಷ್ಟು ಪ್ರಮಾಣದಲ್ಲಿ ಸಿಕ್ಕುವುದಿಲ್ಲ. ಅದರ ಕ್ವಾಲಿಟಿ ಅಂದರೆ ಯೋಗ್ಯತೆ ಕೂಡ ಅಷ್ಟು ಉತ್ಕೃಷ್ಟವಾಗಿಲ್ಲ. ಆದ್ದರಿಂದ ಸಲಹೆ ಕೊಡುವಾಗ್ಗೆ ನ್ಯಾಯವಾದ ಸಲಹೆ ಕೊಡಬೇಕು.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಹೊಳೆನರಸೀಪುರ ತಾಲ್ಲೂಕಿನಲ್ಲಿ ಸಿಕ್ಕುವ ಕಲ್ಲಾರು ಉಪಯೋಗಿಸಿ ಒಂದು ಕೈಗಾರಿಕೆ ಪ್ರಾರಂಭಿಸಬಹುದು ಎಂದು ಸಲಹೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಮಲ್ಲಪ್ಪ.—ಗಮನಕ್ಕೆ ಬಂದಿಲ್ಲ. ಅದು ಸಾಕಷ್ಟು ಪ್ರಮಾಣದಲ್ಲಿ ಸಿಕ್ಕುವುದಿಲ್ಲ ಎಂದು ಸಂಶೋಧನೆಯಲ್ಲಿ ಕಂಡು ಬಂದಿದೆ. ಇದಲ್ಲದೆ ಅದು ಕಳ ದರ್ಜೆಯ ಯೋಗ್ಯತೆ ಉಳ್ಳದ್ದಾಗಿದೆ. ಯಾರಾದರೂ ಖಾಸಗಿಯವರು ಕೈಗಾರಿಕೆ ಪ್ರಾರಂಭಿಸುತ್ತೇವೆಂದು ಮುಂದೆ ಬಂದರೆ ಸರ್ಕಾರ ಸಹಕಾರ ಕೊಡುವುದು. ಆದರೆ ಇಂಥ ಒಂದು ಕೈಗಾರಿಕೆ ಸರ್ಕಾರವೇ ತೆಗೆದುಕೊಳ್ಳಬೇಕು ಎಂಬ ಅಭಿಪ್ರಾಯ ಸರ್ಕಾರಕ್ಕೆ ಇಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ.—ಹಿಂದಕ್ಕೆ ಮಂತ್ರಿಗಳಾಗಿದ್ದ ಶ್ರೀ ಎ. ಜಿ. ರಾಮಚಂದ್ರರಾಯರು ಅನೇಕ ಸಂದರ್ಭಗಳಲ್ಲಿ ಅನೇಕ ಭಾಷಣಗಳಲ್ಲಿ ಹೊಳೆನರಸೀಪುರ ತಾಲ್ಲೂಕಿನಲ್ಲಿ ಯಾವುದಾದರೂ ಕೈಗಾರಿಕೆ ಸ್ಥಾಪನೆ ಮಾಡುತ್ತೇವೆಂದು ಹೇಳಿದ್ದಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

† Indicates that the remarks or speeches have not been revised by the member concerned.

Mr. SPEAKER.—With regard to the representation made by a member who is not before the House, I do not want it to be raised on the floor of the House.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಕರ್ನಾರು ಶೀಟುಗಳನ್ನು ತಯಾರಿಸುವ ಕೈಗಾರಿಕೆಯ ಫ್ಯಾಕ್ಟರಿ ಪ್ರಾರಂಭಿಸುವ ಬಗ್ಗೆ ಪ್ರಿಲಿಮಿನರಿಯಾಗಿ ಡ್ರಿಲಿಂಗ್ ಮೆಶಿನರಿ ಕಳಿಸಿ ಯಾವ ಕ್ವಾಲಿಟಿ ಓರ್ ಸಿಕ್ಕುತ್ತದೆ ಎಂಬುದನ್ನು ಇನ್ವೆಸ್ಟಿಗೇರ್ತ ಮಾಡಲು ಹುಕುಂ ಮಾಡುತ್ತೀರಾ ?

ಶ್ರೀ ಕೆ. ಮಲ್ಲಪ್ಪ.— ಇನ್‌ವೆಸ್ಟಿಗೇರ್ತ ಮಾಡಿಸಿದೆ. ಡೈರೆಕ್ಟರ್ ಆಫ್ ಮೈನ್ಸ್ ಅಂಡ್ ಜಿಆಲಜಿ ಅವರು ಸಂಶೋಧನೆ ಮಾಡಿದ್ದಾರೆ. ಅಲ್ಲಿ ಸಾಕಷ್ಟು ಪ್ರಮಾಣದಲ್ಲಿ ಅದು ಸಿಕ್ಕುವುದಿಲ್ಲ, ಅದರ ಯೋಗ್ಯತೆ ಕೂಡ ಕಡಿಮೆ ದರ್ಜೆಯದಾಗಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

Sri SANJEEVANATH AIKALA.—You have established a Training Centre at Nagamangala. Is it a fact that no proper staff has been appointed to train the students at that centre ?

Sri K. MALLAPPA.—Proper staff has been appointed.

ಶ್ರೀ ಕೆ. ಎಸ್. ನೂರ್ಯನಾರಾಯಣ ರಾವ್.—ಆಸ್‌ಬೆಸ್‌ಟಾಸ್ ಷೀಟ್ಸ್ ತಯಾರಿಸಲಕ್ಕೆ ಯೋಗ್ಯವಾಗಿಲ್ಲವಾದರೆ ಇನ್ನು ಬೇರೆ ಯಾವುದಕ್ಕಾದರೂ ಉಪಯೋಗ ಮಾಡಲು ಯೋಚನೆ ಮಾಡಿದ್ದೀರಾ ?

ಶ್ರೀ ಕೆ. ಮಲ್ಲಪ್ಪ.—ಯೋಚನೆ ಮಾಡಿಲ್ಲ. ಆದರೆ ಸಲಹೆ ಕೊಟ್ಟಿದ್ದಾರೆ. ಇದನ್ನು ಪುಡಿ ಮಾಡಿಬಟ್ಟು ಬಾಯಲರ್ಸ್, ಟ್ಯೂಬ್ಸ್‌ಗಳಿಗೆ, ರೈಲ್ವೆ ಕೋಚ್ ಲೈನಿಂಗ್ ಕೊಡಲು ಉಪಯೋಗಿಸ ಬಹುದು ಎಂದು ಸಲಹೆ ಮಾಡಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಹೊಳೆನರಸೀಪುರ ತಾಲ್ಲೂಕಿನಲ್ಲಿ ಇರತಕ್ಕಂಥ ಜನತೆಗೆ ಸಾಕಷ್ಟು ಕೆಲಸವಿಲ್ಲ, ಉದ್ಯೋಗವಿಲ್ಲ ಇದರಿಂದ ಜೀವನಕ್ಕೆ ತೊಂದರೆಯಾಗಿದೆ ಎಂಬುದನ್ನು ಮಾನ್ಯ ಮಂತ್ರಿಗಳು ಗಮನಕ್ಕೆ ತೆಗೆದುಕೊಂಡು ಜನರ ಜೀವನಕ್ಕೆ ಅನುಕೂಲ ಮಾಡಿಕೊಡುವುದಕ್ಕಾಗಿ ಅಲ್ಲಿ ಯಾವುದಾದರೂ ಒಂದು ಕೈಗಾರಿಕೆ ಸ್ಥಾಪನೆ ಮಾಡುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ಯಾರಾದರೂ ಖಾಸಗಿ ಜನ ಇಂಡಸ್ಟ್ರೀ ಸ್ಥಾಪನೆ ಮಾಡುತ್ತೇವೆಂದು ಮುಂದೆ ಬಂದರೆ ಎಲ್ಲ ರೀತಿ ಪ್ರೋತ್ಸಾಹ ಕೊಡುತ್ತೇವೆಂದು ಹೇಳುತ್ತಲೇ ಬಂದಿದ್ದೇವೆ. ಒಂದು ಅಂಶ ಮಾತ್ರ ಒಪ್ಪುವುದಕ್ಕಾಗುವುದಿಲ್ಲ. ಅದಾವುದೆಂದರೆ ಹೊಳೆನರಸೀಪುರದಲ್ಲಿ ಮಾತ್ರ ಅನ್‌ಎಪ್ಲಾಯ್‌ಮೆಂಟ್ ಇದೆ ಎನ್ನತಕ್ಕಂಥಾದ್ದು. ಅಲ್ಲಿ ಮಾತ್ರ ನಿರುದ್ಯೋಗ ಇದೆ ಎಂದು ಒಪ್ಪಲಿಕ್ಕಾಗುವುದಿಲ್ಲ. ಸಾಮಾನ್ಯವಾಗಿ ದೇಶದಲ್ಲಿ ಎಲ್ಲಾ ಕಡೆ ನಿರುದ್ಯೋಗ ಇದೆ. ಅದೇ ಪ್ರಕಾರ ಅಲ್ಲಿಯೂ ನಿರುದ್ಯೋಗ ಇರಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಯಾವ ಖನಿಜ ಹೇರಳವಾಗಿ ಸಿಕ್ಕುತ್ತದೆ ?

ಶ್ರೀ ಕೆ. ಮಲ್ಲಪ್ಪ.— ರಿಲೇಟಿವ್ ಕ್ವಾಂಟಿಟಿ ನ್ವಡಿ ಮಾಡಿಲ್ಲ. ಅಸೆಸ್ ಮಾಡಿಲ್ಲ.

ಶ್ರೀ ಎಚ್. ಡಿ ದೇವೇಗೌಡ.—ಹೊಳೆನರಸೀಪುರ ತಾಲ್ಲೂಕಿನಲ್ಲಿರುವ ಮೈನ್ಸ್‌ಗಳಲ್ಲಿ ಹೆಚ್ಚಾಗಿ ಮೈಕಾ ಸಿಕ್ಕುತ್ತದೆ ಮತ್ತು ನೂರು ವರ್ಷಗಳ ವರೆಗೆ ಮೈಕಾ ತೆಗೆಯುವುದಕ್ಕೆ ಅವಕಾಶವಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಮಲ್ಲಪ್ಪ —ಮೈಕಾ ಸಿಕ್ಕುತ್ತದೆ ಎಂದು ಒಪ್ಪಿಕೊಂಡಿದ್ದೇವೆ. ಅದನ್ನು ತೆಗೆದು ಮಾರಾಟ ಮಾಡುವುದಕ್ಕೆ ಲೈಸೆನ್ಸ್ ಸಹ ಕೊಡಲಾಗಿದೆ. ಅವರು ಮೈಕಾ ಮಾರಾಟ ಸಹ ಮಾಡುತ್ತಿದ್ದಾರೆ.

ಶ್ರೀ ಕೆ. ಎಸ್. ನೂರ್ಯನಾರಾಯಣರಾವ್.—ಅದನ್ನು ಕೊಂಡುಕೊಂಡು ಇಲೆಕ್ಟ್ರಿಕ್ ಫ್ಯಾಕ್ಟರಿಯಲ್ಲಿ ಉಪಯೋಗಿಸಲು ಸರಕಾರ ಏಕೆ ಪ್ರಯತ್ನ ಮಾಡಬಾರದು ?

ಶ್ರೀ ಕೆ. ಮಲ್ಲಪ್ಪ.—ಅವಕಾಶವಿದ್ದಾಗ ಕೊಂಡುಕೊಳ್ಳುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ಮೈಕಾದಿಂದ ಇಲೆಕ್ಟ್ರಿಕ್ ಸಣ್ಣ ಉಪಕರಣಗಳನ್ನು ತಯಾರಿಸುವುದಕ್ಕೆ ಅವಕಾಶ ಇರುವುದರಿಂದ ಒಂದು ಸಣ್ಣ ಕಾರ್ಖಾನೆ ಅಲ್ಲಿ ತೆಗೆಯುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ಇಲೆಕ್ಟ್ರಿಕ್ ಉಪಕರಣ ತಯಾರಿಸುವುದಕ್ಕೆ ಒಳ್ಳೆಯ ಕ್ವಾಲಿಟಿ ಬೇಕಾಗುತ್ತದೆ.

ಶ್ರೀ ಕೆ. ಲಕ್ಕಪ್ಪ.—ಹೊಳೆನರಸೀಪುರ ತಾಲ್ಲೂಕಿನಲ್ಲಿ ಎಂಥಾದರೂ ಒಂದು ಇಂಡಸ್ಟ್ರೀ ಪ್ರಾರಂಭ ಮಾಡುವುದಕ್ಕೆ ಭರವಸೆ ಕೊಡುತ್ತೀರಾ ?

ಅಧ್ಯಕ್ಷರು.—ಎಂಥದ್ದಾದರೂ ಮಾಡಲಿಕ್ಕೆ ಭರವಸೆ ಕೊಡುವುದಿಲ್ಲ.

ಶ್ರೀ ಕೆ. ಲಕ್ಕಪ್ಪ. ಅಲ್ಲಿ ದೊರೆಯುವ ಕಚ್ಚಾ ಮಾಲು ಏನು ಇದೆಯೋ ಅದನ್ನು ಉಪಯೋಗಿಸಿ ಯಾವುದಾದರೂ ಒಂದು ಸಣ್ಣ ಕೈಗಾರಿಕೆ ಪ್ರಾರಂಭವಾಗುವ ಹಾಗೆ ಮಾಡುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ಸಣ್ಣ ಕೈಗಾರಿಕೆ ಖಾನಸಿ ವಲಯದಲ್ಲಿ ಸ್ಥಾಪನೆಯಾಗಬೇಕು. ಅಲ್ಲಿ ದೊರೆಯುವ ಕಚ್ಚಾ ಮಾಲು ಉಪಯೋಗಿಸಿಕೊಂಡು ಖಾನಗಿಯವರು ಬಂದು ಕೈಗಾರಿಕೆ ಪ್ರಾರಂಭ ಮಾಡಿದರೆ ಕೈಗಾರಿಕೆಗೆ ಬೇಕಾಗುವ ಎಲ್ಲ ಪ್ರೋತ್ಸಾಹ ಸರಕಾರ ಕೊಡಲಿಕ್ಕೆ ತಯಾರಿದೆ. ಸರ್ಕಾರವೇ ಮಾಡಬೇಕೆಂಬುದು ಇಂಡಸ್ಟ್ರಿಯಲ್ ಪಾಲಸಿಗೆ ಅಂದರೆ ಸರ್ಕಾರದ ನೀತಿಗೆ ವಿರುದ್ಧವಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ತಾವು ಅನೇಕ ಸಾರಿ ತಮ್ಮನ್ನು ನೋಡಿದ ಕಾಲದಲ್ಲಿ ಇಲಾಖೆಯ ಮುಖ್ಯಾಧಿಕಾರಿಗಳನ್ನು ಕರೆದುಕೊಂಡು ಬಂದು, ತಜ್ಞರನ್ನು ಕೇಳಿ ಅವರೊಡನೆ ಸಮಾಲೋಚನೆ ನಡೆಸಿ ಇಂಡಸ್ಟ್ರಿಯನ್ನು ಪ್ರಾರಂಭ ಮಾಡುವ ಬಗ್ಗೆ ಪರಿಶೀಲನೆ ಮಾಡುತ್ತೇನೆ ಎಂದು ಭರವಸೆ ಕೊಟ್ಟಿಲ್ಲವೇ ?

ಶ್ರೀ ಕೆ. ಮಲ್ಲಪ್ಪ.—ಹೌದು, ಇವತ್ತೂ ಕೂಡ ನಾನು ಬರಲಿಕ್ಕೆ ತಯಾರಾಗಿದ್ದೇನೆ.....

Mr. SPEAKER.—I want to mention it to the House that it is a parliamentary convention and much respected convention that any conversation any member had with the Ministers should not be disclosed here. Otherwise, they will not tell them anything hereafter. It is in the interest of the Hon'ble Members that I say this. If I allow such questions, it becomes a bad precedent and another member may say that I allowed such and such a question on a particular day.

1-30 P.M.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—ಹೊಳೆನರಸೀಪುರದಲ್ಲಿ ಸಿಕ್ಕ ತಕ್ಕ ಟಾಲ್ಕ್‌ಗೆ ಇಂಡಿಯಾದೇಶದಲ್ಲಿ ಬಹಳ ಡಿಮ್ಯಾಂಡ್ ಇದೆ—ಫೇಸ್ ಪೌಡರ್ ಮತ್ತು ತತ್ಸಂಬಂಧವಾದ ಇಂಡಸ್ಟ್ರೀ ಮಾಡುವುದಕ್ಕೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಮಲ್ಲಪ್ಪ.—ಫೇಸ್ ಪೌಡರ್‌ಗೆ ಆಗುತ್ತದೆಯೋ ಇಲ್ಲವೋ ಹೇಳಲಿಕ್ಕೆ ಆಗುವುದಿಲ್ಲ, ಕಾಗದ ತಯಾರು ಮಾಡಲಿಕ್ಕೆ ಆ ಟಾಲ್ಕ್ ಪೌಡರನ್ನು ಉಪಯೋಗ ಮಾಡಬಹುದು.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಇಲ್ಲಿ ಮೈಕಾ ಹೇರಳವಾಗಿ ಸಿಕ್ಕುತ್ತಾ ಇರುವುದರಿಂದ ಖಾಸಗಿಯವರು ಯಾರೂ ಮುಂದೆ ಬಂದಿಲ್ಲ. ಆದ್ದರಿಂದ ಸರ್ಕಾರದವರೇ ಇಲ್ಲಿ ಒಂದು ಸಣ್ಣ ಕೈಗಾರಿಕೆಯನ್ನು ಪ್ರಾರಂಭ ಮಾಡುವುದು ಸೂಕ್ತವಲ್ಲವೇ ?

ಶ್ರೀ ಕೆ. ಮಲ್ಲಪ್ಪ.—ಕೈಗಾರಿಕೆಯನ್ನು ಪ್ರಾರಂಭ ಮಾಡುವುದಕ್ಕೆ ಯಾರೂ ಮುಂದೆ ಬಂದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಸಣ್ಣ ಕೈಗಾರಿಕೆಗಳ ವಿಷಯದಲ್ಲಿ ಸರ್ಕಾರದವರ ನೀತಿ ಏನು ಎಂಬುದನ್ನು ಆಗಲೇ ಹೇಳಿದ್ದೇನೆ, ಸಣ್ಣ ಪುಟ್ಟ ಕೈಗಾರಿಕೆಗಳನ್ನು ತೆಗೆದುಕೊಂಡು ನಡೆಸುವುದು ಸರ್ಕಾರದ ನೀತಿ ಅಲ್ಲ. They are not public sector industries. They are private sector industries. However, if any private party is forthcoming, Government is prepared to give all assistance—technical as well as financial.

Acquisition of Survey No. 128 of Makali Village in Channapatna Taluk.

*Q.—1162. Sri T. MADAIAH GOWDA (Ramanagaram).—

Will the Government be pleased to state :—

(*a*) since how long the question of acquisition of survey No. 128 of Makali Village in Channapatna Taluk for village extension is pending ;

(*b*) when the money for the village extension was deposited by the villagers ;

(*c*) whether any responsibility for the delay is fixed ; and what action has been taken to avoid the delay in future ?